# ಅಲ್ಲಿಂದ ಇಲ್ಲಿಗೆ... ಮಲ್ಲಿಗೆ

'ಅಂಗೈ ಮೇಲೆ ಹಾಕಿಕೊಂಡರೆ ಮಲ್ಲಿಗೆ ತೂಕ...' ಎಂದರು ಕಟ್ಟುಮಸ್ತು ಮೈಕಟ್ಟಿನ ಆ ನಟ. ನಾಯಕಿಯ ಜೊತೆ ಮಳೆಹಾಡಿನ ಚಿತ್ರೀಕರಣದ ಅನುಭವವನ್ನು ಅವರು ಎಷ್ಟು ಹೇಳಬೇಕೋ ಅಷ್ಟನ್ನು 'ಎಡಿಟ್' ಮಾಡಿದಂತೆ ಹೇಳಿಕೊಂಡರು.

ಆ ನಟಿ ಕೆಲವೇ ವರ್ಷಗಳ ಹಿಂದೆ ಮೊದಲ ಸಿನಿಮಾಗೆ ಆಯ್ಕೆಯಾದಾಗ ಮುಖದ ತುಂಬಾ ನಕ್ಕಿದ್ದರು. ಹೈಸ್ಕೂಲು ವಿದ್ಯಾರ್ಥಿನಿ ತರಹ ಕಾಣುತ್ತಿದ್ದೀರಿ ಎಂದಾಗ, 'ಡೆಂಟಿಸ್ಟ್ ಆಗಲು ಹೊರಟಿದ್ದೆ, ಈಗ ನಟಿಯಾಗಲು ನಿರ್ಧರಿಸಿದ್ದೇನೆ' ಎಂದು ಸೋಜಿಗ ಮೂಡಿಸಿದ್ದರು. ಎಲ್ಲಿ ಹೋದರೂ ಅವರ ಅಮ್ಮ ಜೊತೆಯಲ್ಲಿ ಇರುತ್ತಿದ್ದರು. ಮಳೆ ಹಾಡಿನ ಸಂದರ್ಭದಲ್ಲಿ ಮಗಳ ಒಂದೊಂದು ಕದಲಿಕೆಯೂ ಅವರ ಉಸ್ತುವಾರಿಯಲ್ಲೇ ನಡೆದದ್ದು. ಅಮ್ಮ ಮಗಳನ್ನು ಎಷ್ಟು ಕಾಳಜಿ ಮಾಡುತ್ತಿದ್ದರು.

ಅರ್ಧ ಡಜನ್ ಚಿತ್ರಗಳಿಗೆ ಸಹಿ ಮಾಡುವ ಮೊದಲೇ ನಟಿಯದ್ದೊಂದು ಪ್ರೇಮ ಪ್ರಸಂಗದ ಪುಗ್ಗೆ ಹಾರತೊಡಗಿತು. ಮರಿ ಡೈನಮಿಕ್ ತಾರೆಯ ಜೊತೆಗೆ ಹೆಸರು ಕೇಳಿಬಂದಷ್ಟೇ ಬೇಗ ಅಳಿಸಿಯೂ ಹೋಯಿತು. ಸಾಲು ಸಾಲು ಚಿತ್ರಗಳು ಸೋತವು. ಪ್ರೇಮದ ಕಥೆ ಏನಾಯಿತೋ? ನಾಯಕಿ ಹೇಳಲಿಲ್ಲ.

ಶಿಸ್ತಿನ ವಿಷಯದಲ್ಲಿ ಹುಡುಗಿ ಹಿಂದುಳಿದಿದ್ದಾಳೆ ಎಂಬುದು ಒಬ್ಬ ಅನುಭವಿ ನಿರ್ದೇಶಕರ ಆರೋಪ. ವಿದೇಶದಲ್ಲಿ ಚಿತ್ರೀಕರಣಕ್ಕೆಂದು ಹೋದಾಗ ಈ ವಿಷಯವಾಗಿಯೇ ಇಬ್ಬರ ನಡುವೆ ಮಾತಾಗಿ, ಅದು ಜಗಳಕ್ಕೆ ತಿರುಗಿ, ಆ ನಿರ್ದೇಶಕರು ಕಪಾಳಮೋಕ್ಷ ಮಾಡಿ, ನಟೀಮಣಿಯು ಚಾನೆಲ್‌ಗಳ ಮೂಲಕ ಆ ಸುದ್ದಿಯನ್ನು 'ಬ್ಲಾಸ್ಟ್' ಮಾಡಿದ್ದರು. ಆ ನಿರ್ದೇಶಕರೂ ಒಂದು ವಾಹಿನಿಯಲ್ಲಿ ಕುಳಿತು ನಟೀಮಣಿಯ ಅಶಿಸ್ತಿನ ಕುರಿತು ಸವಿವರವಾಗಿ ಗಂಟೆಗಟ್ಟಲೆ ಅನುಭವ ಹಂಚಿಕೊಂಡರು.

ಅಂಥ ದೊಡ್ಡ ಗಲಾಟೆ ನಡೆದರೂ ಆ ಚಿತ್ರದ ಓಪನಿಂಗ್‌ಗೆ ಏನೂ ಅನುಕೂಲವಾಗಲಿಲ್ಲ ಎಂಬುದು ಬೇರೆ ಮಾತು.

ಈಗ ಆ ನಟೀಮಣಿ ಮೊದಲಿನಷ್ಟು ಲೈಮ್‌ಲೈಟ್‌ನಲ್ಲಿ ಇಲ್ಲ. ಹೊಸ ಹೊಸ ನಾಯಕಿಯರು ಬಂದು, ಉದ್ಯಮದ ಪಟ್ಟುಗಳನ್ನು ನಿಧನಿಧಾನವಾಗಿ ತಿಳಿದುಕೊಳ್ಳುತ್ತಿರುವುದರಿಂದ ಅವರಿಗೆ ಮೊದಲಿನಂತೆ ಮಣೆ ಹಾಕುವವರಿಲ್ಲ. 'ಒಂದು ಕೋನದಲ್ಲಿ ಜಪಾನಿ ಹುಡುಗಿಯಂತೆ ಕಾಣುತ್ತೀಯೆ' ಎಂದು ಒಬ್ಬರು ಕೊಟ್ಟ ಕಾಂಪ್ಲಿಮೆಂಟನ್ನು ಚಪ್ಪರಿಸುತ್ತಾ ಹೇಳಿಕೊಂಡಿದ್ದ ಆ ನಟಿಗೆ ಈಗ ಪ್ರೇಮಾಂಕುರ ಆಗಿರುವ ಸುದ್ದಿ ಇದೆ. ನಟಿಯಾಗಿ ದಿಗ್ದಿಗಂತವಾಗಿ ಏರಲು ಹೊರಟಿದ್ದ ನಾಯಕಿ ಬದುಕಿನಲ್ಲಿ ಈ ತಿರುವು ಮೂಡಿರುವುದು ಅಚ್ಚರಿ. ಪ್ರೇಮಾಂಕುರವಾಗಿರುವುದು ನಿಜವೋ, ಸುಳ್ಳೋ ಎಂಬುದನ್ನು ಸ್ಪಷ್ಟಪಡಿಸಲು ನಿರಾಕರಿಸುತ್ತಿರುವ ಅವರು ಇತ್ತೀಚೆಗೆ ಹೆಚ್ಚು ಮಾತಿಗೆ ಸಿಗುತ್ತಿಲ್ಲ. ಸಿಕ್ಕರೂ ಖಾಸಗಿ ವಿಷಯಗಳನ್ನು ಕೇಳಬೇಡಿ ಎಂದು ಅಜಿರ್ ಹಾಕಿಯೇ ಮಾತಿಗಿಳಿಯುವುದು.

ಬೇರೆ ರಾಜ್ಯದವರಾದರೂ ಕನ್ನಡ ಚಿತ್ರರಂಗದಲ್ಲಿ ಇಷ್ಟು ಕಾಲ ಉಳಿದದ್ದು ಸಾಧನೆಯಲ್ಲವೇ ಎಂದು ಕೇಳಿದರೆ, 'ಸಿನಿಮಾಗೆ ಭಾಷೆ ಇಲ್ಲ. ಅಭಿನಯ ಗಂಧ ತೀಡಿಕೊಂಡರೆ ಸಾಕು' ಎನ್ನುವ ಗಂಧವತಿ ಕೈಲಿ ಎಷ್ಟು ಚಿತ್ರಗಳಿವೆ ಎಂದು ಮಾತ್ರ ಸ್ಪಷ್ಟವಾಗಿ ಹೇಳುತ್ತಿಲ್ಲ.

● ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s. Rajhans Enterprises, no. 134, 4th main road, Industrial Town, Rajajinagar, Bangalore - 560044. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited.RNI No 17129/68